ಸಾಕ್ಷಿಯನ್ನು ದಿನಾಂಕ 23.07.2024 ರಂದು ಕರೆದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಶ್ರೀ ಎಸ್ ಅರ್ ಬಿ ವಕೀಲರಿಂದಃ**

ನನ್ನ ಸಾಕ್ಷ್ಯದ ಹೇಳಿಕೆಯನ್ನು ಪ್ರಮಾಣಪತ್ರದ ರೂಪದಲ್ಲಿ ನನ್ನ ಹೇಳಿಕೆಯಂತೆ ತಯಾರಿಸಿ ಸಲ್ಲಿಸಿದ್ದು ಅದರಲ್ಲಿರುವ ವಿಚಾರಗಳು ಸತ್ಯವಾಗಿರುತ್ತವೆ. ಸದರಿ ಈ ಪ್ರಮಾಣಪತ್ರದಲ್ಲಿರುವ ಸಹಿ ನನ್ನದೇ ಇರುತ್ತದೆ. ನನ್ನ ವಾದಕ್ಕೆ ಪೂರಕವಾಗಿ

1 ಮತ್ತು 2 ನೇ ಪ್ರತಿವಾದಿ ಮತ್ತು 2 ನೇ ಪ್ರತಿವಾದಿ ಅತನ ಮೈನರ್ ಮಕ್ಕಳಾದ 3 ಮತ್ತು 4 ನೇ ಪ್ರತಿವಾದಿಯ ಪರವಾಗಿ ನನಗೆ ದಿನಾಂಕ 14.09.2018 ರಂದು ಬರೆದುಕೊಟ್ಟಿರುವ ನೊಂದಾಯಿತ ಕ್ರಯದ ಕರಾರು ಪತ್ರವನ್ನು ಹಾಜರು ಮಾಡಿದ್ದು ಅದನ್ನು ನಿಪಿ 1 ಎಂದು, ನಿಪಿ 1 ಕ್ಕೆ 1 ನೇ ಪ್ರತಿವಾದಿ ಹೆಬ್ಬೆಟ್ಟಿನ ಗುರುತನ್ನು ಹಾಕಿರುತ್ತಾರೆ. 2 ನೇ ಪ್ರತಿವಾದಿಯ ಸಹಿಯನ್ನು ನಿಪಿ 1(ಎ) ಎಂದು, ನನ್ನ ಸಹಿಯನ್ನು ನಿಪಿ 1(ಬಿ) ಎಂದು, ನಿಪಿ 1 ಕ್ಕೆ ಸಾಕ್ಷಿದಾರರಾಗಿ ರಾಮಸುಬ್ಬಾರೆಡ್ಡಿ ಮತ್ತು ಪೆದ್ದಿರೆಡ್ಡಿ ರವರು ಸಹಿ ಮಾಡಿದ್ದು, ಅವರ ಸಹಿಗಳನ್ನು ನಿಪಿ 1(ಸಿ ಮತ್ತು ಡಿ) ಎಂದು, ನಿಪಿ 1 ನ್ನು ಪತ್ರ ಬರಹಗಾರರಾದ ಸೋಮಶೇಖರ್ ರವರು ತಯಾರಿಸಿದ್ದು ಅವರ ಸಹಿಯನ್ನು ನಿಪಿ 1(ಇ) ಎಂದು ಗುರುತಿಸಲಾಯಿತು.

ಪ್ರತಿವಾದಿಯರಿಗೆ ವಕೀಲರ ಮೂಲಕ ನೀಡಿದ ನೋಟೀಸ್ ನ ಕಚೇರಿ ಪ್ರತಿಯನ್ನು **ನಿಪಿ 2** ಎಂದು, ಪ್ರತಿವಾದಿಯರಿಗೆ ಜಾರಿಯಾಗದೇ ವಾಪಸ್ಸು ಬಂದ ಅಂಚೆ ಲಕೋಟೆಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ನಿಪಿ 3 ರಿಂದ 6 ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದರಿಂದ , ಮುಂದೂಡಲಾಯಿತು.

ನನ್ನ ಉಕ್ತಲೇಖನದ ರೀತ್ಯಾತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಮಾಡಲಾಯಿತು.

ಓ.ಹೆ.ಕೇ.ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಚಿಂತಾಮಣಿ